ತೆಗೆದುಕೊಳ್ಳೋಣ ಎಂದು ಹೇಳಿದರು. ನಾನು ನಿನ್ನೆ ಮುಂದಕ್ಕೆ ಹಾಕಲು ಒಪ್ಪಿಕೊಂಡಿದ್ದೇನೆ. ಏನಾಗಿದೆ ಎಂದರೆ ಡಿಸ್ಟ್ರಿಷನರಿ ಹಣ ಮೂರು ಕೋಟಿ ರೂಪಾಯಿಗಳು ಯಾರು ಆವರಿಗೆ ಬಂದು ಅಪ್ರೋಚ್ ಆಗಿದ್ದಾರೆ, ಆವರಿಗೆ ನೀಡಿರುತ್ತಾರೆ. ಎಲ್ಲಿ ನೀಡ್ ಬೇಸ್ಡ್ ಇದೆ ಅಲ್ಲಿ ಕೊಡಲೇ ಇಲ್ಲ. ಹೀಗಾದರೆ ಮಾಡುವುದು ಹೇಗೆ? ಮಾನ್ಯ ಸಚಿವರು ಬಂದಿಲ್ಲವೆಂದು ಕೇಳಿದರೆ, ನೀವು ಸಿಟ್ಟಿಗೆ ಬಂದಿರುತ್ತೀರಿ ಎಂದು ಹೇಳುತ್ತೀರಿ. ಇದಕ್ಕೆ ಪರಿಹಾರ ಏನು?

ಶ್ರೀ ಎಂ.ಪಿ. ಪ್ರಕಾಶ್ :— ಸಂಬಂಧಪಟ್ಟ ಸಚಿವರು ಮೇಲ್ಮನೆಯಲ್ಲಿ ಇರುವುದರಿಂದ ಬಂದ ನಂತರ ಉತ್ತರವನ್ನು ಕೊಡಿಸಲಾಗುವುದು. ಸಣ್ಣ ನೀರಾವರಿಗೆ ಸಂಬಂಧಪಟ್ಟ ವಿಚಾರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಳೆಗೆ ಕೆರೆಗಳು ಒಡೆದು ಹೋಗಿವೆ. ಆದರ ದುರಸ್ಥಿಗೆ ಹಣವನ್ನು ಬಿಡುಗಡೆ ಮಾಡುತ್ತೇನೆಂದು ಹೇಳಿದರು. 3 ಕೋಟಿ ರೂಪಾಯಿಗಳನ್ನು ತಮಗೆ ಬೇಕಾದವರಿಗೆ ಬಿಡುಗಡೆ ಮಾಡಿರುತ್ತಾರೆ. ಎಲ್ಲಿ ಕೆರೆಗಳು ಒಡೆದು ಹೋಗಿವೆ ಅವುಗಳ ರಿಪೇರಿಗೆ ಹಣವನ್ನು ಬಿಡುಗಡೆ ಮಾಡಲಿಲ್ಲವೆಂದರೆ ಹೇಗೆ? ಇದರ ಬಗ್ಗೆ ಏನು ಹೇಳಬೇಕು. ಮತ್ತು ಇದರ ಬಗ್ಗೆ ಯಾರಿಗೆ ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ಮಧ್ಯಾಹ್ನದೊಳಗಾಗಿ ತಮಗೆ ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸಲಾಗುವುದು. ಆವರು ಮೇಲ್ಮನೆಯಲ್ಲಿ ಇದ್ದಾರೆ. ಬಹಳ ಮುಖ್ಯವಾದ ವಿಚಾರವನ್ನು ಎತ್ತಿದ್ದೀರಿ, ಉತ್ತರವನ್ನು ಕೊಡಿಸಿ ಕೊಡುತ್ತೇನೆ.

(ಘ) ಏಳನೇ ತರಗತಿ ಪರೀಕ್ಷೆಯ ಮೌಲ್ಯಮಾಪನ ಸ್ಥಗಿತ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಹೆಚ್.ಜಿ. ಗೋವಿಂದೇಗೌಡರ ಗಮನವನ್ನು ಸೆಳೆಯುತ್ತಾ, 7ನೇ ತರಗತಿಯ ಪರೀಕ್ಷೆಯ ಮೌಲ್ಯಮಾಪನ ನೆನೆಗುದಿಗೆ ಬಿದ್ದಿದೆ. ಸರ್ಕಾರ ಮತ್ತು ಶಿಕ್ಷಣ ಸಚಿವರ ಜಗಳದಲ್ಲಿ 8 ಲಕ್ಷ ಜನ ವಿದ್ಯಾರ್ಥಿಗಳ ಜೀವನ ಇವತ್ತು ಜಜ್ಜರಿತವಾಗಿದೆ. ಆ ಮೌಲ್ಯಮಾಪನದ ಬಹಿಷ್ಕಾರದಿಂದ 8 ಲಕ್ಷ ಜನ ವಿದ್ಯಾರ್ಥಿಗಳಿಗೆ ಆ ಬಹಿಷ್ಕಾರದ ಬಗ್ಗೆ ಆವರ ತಲೆಯಲ್ಲಿ ಕುಳಿತುಕೊಳ್ಳುತ್ತದೆ. ನಾನು ಹೇಳುವುದು ಇಷ್ಟೆ: ಮೌಲ್ಯಮಾಪನ ಮಾಡುವುದು ಕೂಡ ಒಂದು ಎಸೆನ್ಷಿಯಲ್ ಸರ್ವೀಸ್ ಎಂದು ಕರೆದು, ಇದು ಪ್ರತಿಸಲವಾಗುವ ಒಂದು ಪ್ರಹಸನವಾಗಿದೆ. ಪರೀಕ್ಷೆ ಬಂದರೆ ಮೌಲ್ಯಮಾಪನದ ಬಹಿಷ್ಕಾರ, ಆದಕ್ಕೆ ಆ ವಿದ್ಯಾರ್ಥಿಗಳು ಏನು ಮಾಡುತ್ತಾರೆ. ಇವರನ್ನು ಆ ವಿದ್ಯಾರ್ಥಿಗಳ ಜೊತೆಗೆ ಬಿಲ್ಲಾಟವಾಡುವುದಕ್ಕೆ ತಾವು ಏಕೆ ಬಿಡುತ್ತೀರಾ? ಆವರು 50 ಪೈಸೆಯಿಂದ ಒಂದು ರೂಪಾಯಿಯನ್ನು ಮೌಲ್ಯಮಾಪನಕ್ಕೆ ಕೊಡಿ ಎಂದು ಕೇಳುತ್ತಿದ್ದಾರೆ, ಇದನ್ನು ಆ ಪರೀಕ್ಷೆಗೆ ಮುಂಚೆ ಇದನ್ನು ಇತ್ಯರ್ಥ ಮಾಡಬಹುದಾಗಿತ್ತು. ಅಥವಾ ಇನ್ನಾವುದೋ ಪ್ಯಾರಿಟಿ

ಮಾಡಬಹುದಾಗಿತ್ತು. ಇವತ್ತಿನವರೆಗೂ ಕೂಡ ಈ ಮೌಲ್ಯಮಾಪನ ಮುಂದುವರೆಯುತ್ತಿದೆ. ಹಿಂದೆ ಒಬ್ಬ ಶಿಕ್ಷಣ ಸಚಿವರು ಇದ್ದರು ಆದರೆ ತಾವು ಅಲ್ಲ. "education is a non-productive sector" ಎಂದು ಹೇಳುತ್ತಿದ್ದರು. ಇವತ್ತು ಆ ಶಿಕ್ಷಣ ಪ್ರಾಫಿಟೇಬಲ್ ಅಥವಾ ನಾನ್ ಪ್ರಾಫಿಟೇಬಲ್ ಆಗಬೇಕೆ? ನಾವು ಅದಕ್ಕೆ ಅವಕಾಶ ಕೊಡಬೇಕೆ? ನಾನು ತಮ್ಮನ್ನು ವಿನಮ್ರವಾಗಿ ಕೇಳಿಕೊಳ್ಳುತ್ತೇನೆ. ಯಾವುದೇ ದೃಷ್ಟಿಯಿಂದ ನಾವು ಆ ವಿದ್ಯಾರ್ಥಿಗಳ ವಿಶ್ವಾಸವನ್ನು ಅಲುಗಾಡಿಸುವುದಕ್ಕೆ ನಾವು ಯಾರು ಪ್ರೋತ್ಸಾಹ ಕೊಡಬಾರದು. ಈ ರೀತಿಯಾಗಿ ಬಹಿಷ್ಕಾರ ಮಾಡುವ, ಈ ಬಹಿಷ್ಕಾರ ಮನೋವೃತ್ತಿಯನ್ನು, ನಾವು ಬಹಿಷ್ಕಾರ ಮಾಡಬೇಕು. ನಾನು 7ನೇ ತರಗತಿಯ ಪರೀಕ್ಷೆಯ ಹಿಂದಿ ಪ್ರಶ್ನೆ ಪ್ರತಿಕೆಯನ್ನು ನೋಡಿದೆ. ಆ ಒಂದು ಪ್ರಶ್ನೆ ಪತ್ರಿಕೆಯಲ್ಲಿ 60 ಮಿಸ್ಟೇಕ್‌ಗಳು. ನಾನು ತಮ್ಮ ಮುಖಾಂತರ ಕೇಳುತ್ತೇನೆ. ಪರೀಕ್ಷೆಗಳು ವಿದ್ಯಾರ್ಥಿಗಳ ಪ್ರತಿಭೆಗೆ ಅವಕಾಶವಾಗಬೇಕೇ ಹೊರತು ಆ ವಿದ್ಯಾರ್ಥಿಗಳ ಜೀವನದ ಜೊತೆಗೆ ಚೆಲ್ಲಾಟವಾಡಲಿಕ್ಕೆ ಅವಕಾಶ ಕೊಡಬಾರದು. ಈ ರೀತಿಯಾಗಿ ಬಹಿಷ್ಕಾರ ಮಾಡುವ ಒಂದು ಪ್ರವೃತ್ತಿಯನ್ನು ಬಹಿಷ್ಕಾರ ಮಾಡುವುದಕ್ಕೆ ಕಾನೂನು ರೀತ್ಯ ಏನು ಕ್ರಮ ಕೈಗೊಳ್ಳುತ್ತೀರಾ? ಶಾಶ್ವತವಾಗಿ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ತಮ್ಮಿಂದ ನಾನು ಉತ್ತರವನ್ನು ಬಯಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಶಾಲೆಯ ಶಿಕ್ಷಕರು 7ನೇ ತರಗತಿ ಪರೀಕ್ಷೆಯ ಮೌಲ್ಯಮಾಪನವನ್ನು ಬಹಿಷ್ಕರಿಸಿದ್ದು, ಅನೇಕ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಿನ್ನೆಯಿಂದ ಪ್ರಾಥಮಿಕ ಶಾಲೆಯ ಶಿಕ್ಷಕರ ಸಂಘದ ಪದಾಧಿಕಾರಿಗಳ ಜೊತೆಗೆ ಚರ್ಚೆಯನ್ನು ನಡೆಸಿರುತ್ತೇವೆ. ಅವರ ಬೇಡಿಕೆಗಳ ಬಗ್ಗೆ ಪರಿಶೀಲಿಸಿರುವುದಾಗಿ ತಿಳಿಸಲಾಗಿದೆ. ಅವರ ಅವಶ್ಯಕವಾದ ಬೇಡಿಕೆಗಳ ಬಗ್ಗೆ ಪರಿಶೀಲಿಸುವುದಾಗಿ ಹೇಳಿದ್ದೇವೆ. ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಉಂಟಾಗಿರತಕ್ಕಂಥ ನೋವು ಏನು ಇದೆ, ಅದು ಸರ್ಕಾರದ ಮನಸ್ಸಿನಲ್ಲಿ ತುಂಬಾ ಇದೆ, ಅದರ ಬಗ್ಗೆ ಸರ್ಕಾರ ಚಿಂತನೆ ಮಾಡಿತ್ತಿದೆ ಎಂದು ಹೇಳಲಿಕ್ಕೆ ಈ ಸಂದರ್ಭದಲ್ಲಿ ಇಚ್ಛಿಪಡುತ್ತದೆ. ನಾನು ಅನೇಕ ಸಲ ಅವರಿಗೆ ಹೇಳಿದ್ದೇನೆ. ಈ ರೀತಿಯಾಗಿ ಮೌಲ್ಯಮಾಪನಕ್ಕೆ ಬಹಿಷ್ಕಾರ ಹಾಕುವುದು ಸರಿಯಾದುದು ಅಲ್ಲ. ನಾವು ಈಗ ಅವರಿಗೆ ಒಂದು ಪೇಪರ್‌ಗೆ 50 ಪೈಸೆಯನ್ನು ಕೊಡುತ್ತಿದ್ದೇವೆ. ಅದು ಕಡಿಮೆಯಾಗುತ್ತದೆಂದು ನನಗೂ ಅನ್ನಿಸುತ್ತದೆ. ಪರೀಕ್ಷೆಯ ಮೌಲ್ಯಮಾಪನ ಮಾಡುವುದಕ್ಕೆ ಬಹಿಷ್ಕಾರ ಹಾಕಿದರೆ ಅದು ಒಂದು ಕರ್ಮಷಿಯಲ್ ಆಗುತ್ತದೆಯೇ ಹೊರತು, ಅದು ಸರ್ವೀಸ್ ಮನೋಭಾವನೆ ಆಗುವುದಿಲ್ಲ. ಘೋಷಣೆ ಮಾಡಿ, ಆ 8 ಲಕ್ಷ ಜನ ಮಕ್ಕಳ ಬಗ್ಗೆ ನಾನು ಯೋಚನೆ ಮಾಡುವುದು ಆ 8 ಲಕ್ಷ ಜನ ಮಕ್ಕಳ ಮನಸ್ಸನ್ನು ನಾವು ಇವತ್ತಿನಿಂದ ಕೆಡಿಸಿಕೊಂಡು ಕುಳಿತುಕೊಂಡರೆ, ಅದರ ಪರಿಣಾಮ ಏನಾಗಬಹುದು. ತಾವು ಇದನ್ನು ಎಸೆನ್‌ಷಿಯಲ್ ಸರ್ವೀಸ್ ಎಂದು ಘೋಷಣೆ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್.ಜಿ. ಗೋವಿಂದೇಗೌಡ :— ನಾನು ಸಂಬಂಧಪಟ್ಟ ಮೌಲ್ಯಮಾಪನ ಬಹಿಷ್ಕಾರ ಮಾಡಿದ ಸಂಘದ ಪದಾಧಿಕಾರಿಗಳಿಗೆ, ಇವತ್ತು ಅಥವಾ ನಾಳೆಯೊಳಗಾಗಿ ತಿಳಿಸಬೇಕೆಂದು ಹೇಳಿದ್ದೇನೆ. ಪುನಃ ಅಧಿಕಾರಿಗಳನ್ನು ಕರೆದು ಇದಕ್ಕೆ ಏನು ಮಾಡಬೇಕೆನ್ನುವ ಬಗ್ಗೆ ಯೋಚನೆ ಮಾಡುತ್ತೇನೆ. ಇದು ಬಹಳ ಸೀರಿಯಸ್ಸಾಗಿ ಇದೆ. ಇಷ್ಟನ್ನು ನಾನು ಪ್ರಯತ್ನ ಮಾಡಿದ್ದೇನೆ. ಎಲ್ಲಾ ತರಗತಿಗಳಲ್ಲಿ ಕಾಪಿ ಹೊಡೆಯುವ ಸಂಪ್ರದಾಯವಾಗಿದೆ. ಈಗ ತಾವು ನೋಡಿದ್ದೀರಾ, ಎಸ್.ಎಸ್.ಎಲ್.ಸಿ.ಯಲ್ಲಿ ಕೂಡ ಕಾಪಿ ಹೊಡೆಯುವುದು.

ಶ್ರೀ ಎಸ್. ಸುರೇಶ್ ಕುಮಾರ್ :— ಉಪಾಧ್ಯಕ್ಷರೆ, ಇದಕ್ಕೆ ಬೇರೆ ಅರ್ಥವಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಉಪಾಧ್ಯಕ್ಷರೆ, ವ್ಯಾಪಕವಾಗಿ ಎಸ್ಎಸ್ಎಲ್ಸಿ ಪರೀಕ್ಷೆಗಳಲ್ಲಿ ಕಾಪಿ ಹೊಡೆಯುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ತಡೆಗಟ್ಟಲಿಕ್ಕೆ ಏನಾದರೂ ಕ್ರಮ ಕೈಗೊಳ್ಳಬೇಕು, ಏಕೆಂದರೆ ಲಾಠಿ ಚಾರ್ಜ್ ಮಾಡತಕ್ಕಂಥ ಸ್ಥಿತಿಗೆ ಹೋಗಿದ್ದಾರೆ. ಚೀಟಿ ಕೊಡುವುದು, ಏನಾದರೂ ಒಂದು ವ್ಯವಸ್ಥೆ ನಡೆದೇ ನಡೆಯುತ್ತಿರುತ್ತದೆ, ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ಕೂಡ ಚರ್ಚೆ ಆಗಿತ್ತು. ಇದಕ್ಕೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಇದರ ಬಗ್ಗೆ ಸರ್ಕಾರದವರು ಕಠಿಣವಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಕಳೆದ 4 ವರ್ಷಗಳಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ನಮ್ಮ ಇಲಾಖೆಯ ಉಪ ನಿರ್ದೇಶಕರುಗಳು, ಎಇಓಗಳ ಒಂದು ಸ್ಕ್ವಾಡ್ ಮಾಡಿದ್ದೇವೆ. ಒಂದೊಂದು ಜಿಲ್ಲೆಯಲ್ಲಿ ಮೂರು-ನಾಲ್ಕು ಸ್ಕ್ವಾಡ್‌ಗಳನ್ನು ಮಾಡಿ, ಎಲ್ಲೆಲ್ಲಿ ಈ ತರಹದ ಕಂಪ್ಲೇಂಟ್ ಬರುತ್ತವೆ ಅಲ್ಲಿಗೆ ಕೂಡಲೇ ಹೋಗುವ ಕಾರ್ಯಕ್ರಮವನ್ನು ನಾವು ಮಾಡಿಕೊಂಡಿದ್ದೇವೆ. ಆದರೂ ಕೂಡ ಇದು ಆಗುತ್ತದೆಂದಾಗ ಇದಕ್ಕೆ ಸಾರ್ವಜನಿಕರೂ ಕೂಡ ಇದಕ್ಕೆ ಸಹಕರಿಸಬೇಕಾಗುತ್ತದೆ. ಕೇವಲ ಸರ್ಕಾರ ಮತ್ತು ಅಧಿಕಾರಿಗಳು ಮಾಡಬೇಕೆನ್ನುವ ಬದಲು, ಎಲ್ಲಿ ಇಂತಹ ಅವ್ಯವಸ್ಥೆ ನಡೆಯುತ್ತದೆ, ಅದನ್ನು ಸರ್ಕಾರದ ಗಮನಕ್ಕೆ ಕೂಡಲೇ ತಂದು ಮುಚ್ಚಬೇಕು, ನಮ್ಮ ಮಕ್ಕಳ ಹಿತದೃಷ್ಟಿಯನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ. ಸರ್ಕಾರದ ಕಾರ್ಯಕ್ರಮ ಏನು ಇದೆ, ಅದರ ಜೊತೆಯಲ್ಲಿ ಸಾರ್ವಜನಿಕರೂ ಸಹ ವಿಷಯಗಳು ಗೊತ್ತಾದ ತಕ್ಷಣ ಸಂಬಂಧಪಟ್ಟವರಿಗೆ ಹೇಳಬೇಕು, ಮತ್ತು ತಿಳಿಸಬೇಕು. ಇದನ್ನು ಇರಾಡಿಕೇಷನ್ ಮಾಡುವುದಕ್ಕೆ ನೀವು ಸಹಕರಿಸಬೇಕು. ಸರ್ಕಾರ ಇದಕ್ಕೆ ಸದಾ ಸಿದ್ಧವಾಗಿದೆ ಎಂದು ನಾನು ಹೇಳುತ್ತೇನೆ.

ಶ್ರೀ ಎನ್. ರಾಜೇಂದ್ರನ್ :— ಎಲ್ಲೆಲ್ಲಿ ಮಾಸ್ ಕಾಪಿ ಮಾಡುತ್ತಿದ್ದಾರೋ ಅಲ್ಲೆಲ್ಲಾ ಉಪ ನಿರ್ದೇಶಕರು ಪರೀಕ್ಷೆಯ ಕೇಂದ್ರಗಳನ್ನು ಕೊಟ್ಟಿದ್ದಾರೆ, ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಿಲ್ಲವೇ? ಹೋದ ವರ್ಷ ಎಲ್ಲಿ ಮಾಸ್ ಕಾಪಿಂಗ್ ಮಾಡಿದ್ದಾರೋ ಪುನಃ

ಅದೇ ಜಾಗದಲ್ಲಿ ಇವರು ಪರೀಕ್ಷೆಯ ಕೇಂದ್ರಗಳನ್ನು ಕೊಟ್ಟಿದ್ದಾರೆ. You take action against your DDPI also.

ಶ್ರೀ ಹೆಚ್.ಸಿ. ಗೋವಿಂದೇಗೌಡ :— ಮಾಸ್ ಕಾಪಿಂಗ್‌ನಲ್ಲಿ ಯಾವ ಒಬ್ಬ ಉಪನಿರ್ದೇಶಕನು ಭಾಗಿಯಾಗಿದ್ದಾನೆಂದು ಹೆಸರು ಬರೆದು ಕೊಟ್ಟರೆ, ನಾನು ಸಾಯಂಕಾಲ 4 ಗಂಟೆಯೊಳಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇಷ್ಟೆಲ್ಲಾ ಶ್ರಮವಹಿಸಿ ಕೆಲಸ ಮಾಡತಕ್ಕಂಥ ಒಬ್ಬ ಅಧಿಕಾರಿಯ ಮೇಲೆ, ಯಾರೋ ಒಬ್ಬರು ಬಂದು ಹೇಳಿದಾಗ ನಾವು ಅದನ್ನು ದೊಡ್ಡದಾಗಿ ಮಾಡುವುದು ಸರಿಯಾದುದಲ್ಲ. ಮಾಸ್ ಕಾಪಿ ಬಗ್ಗೆ ನಮ್ಮ ಸರ್ಕಾರ ಬಂದ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಂಡಿದೆ.

ಶ್ರೀ ಹೆಚ್.ಸಿ. ಮಾಧುಸ್ವಾಮಿ :— ದೊಡ್ಡದಾದ ಇಲಾಖೆಯಲ್ಲಿ ಎಲ್ಲೋ ಒಂದು ಆಗಿರಬಹುದು.

(ಗೊಂದಲ)

SRIS. RAHEENDRAN : Wherever mistake is there it is my duty to bring to your notice. ಇರುವುದನ್ನು ತಪ್ಪು ಎಂದು ಹೇಳಬಾರದೇ? ನಾನು ಮಾನ್ಯ ಗೋವಿಂದೇಗೌಡರ ಮೇಲೆ ತಪ್ಪು ಹೇಳಲಿಲ್ಲ. ಆ ಡಿ.ಡಿ.ಪಿ.ಐ. ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ. It is my legitimate right to bring to your notice.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಮಾನ್ಯ ಸಚಿವರೆ, ಈ ಪರೀಕ್ಷೆಯ ಪದ್ಧತಿಯನ್ನು ಬೇರೆ ರೀತಿ ಮಾಡಿ. ಆಬ್ಜೆಕ್ಟಿವ್ ಟೆಸ್ಟ್ ಮಾಡಿ, ಕಂಪ್ಯೂಟರೈಸೇಷನ್ ಮಾಡಿದರೆ ಇದು ಎಲ್ಲಾ ನಿಂತು ಹೋಗುತ್ತದೆ. ಪರೀಕ್ಷಾ ಪದ್ಧತಿ, ಈ ಸ್ಟೈಕ್ ಎಲ್ಲಾ ನಿಂತು ಹೋಗುತ್ತದೆ. ಇದನ್ನು ಮಾಡುವುದಕ್ಕೆ ಏನಾದರೂ ಸಾಧ್ಯವಿದೆಯೇ?

(ಜ) ಔಷಧ ವ್ಯವಹಾರದಲ್ಲಿ ಅವ್ಯವಹಾರಗಳು.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ನಮ್ಮ ಬೆಂಗಳೂರು ನಗರದಲ್ಲಿರತಕ್ಕಂಥ ಮತ್ತು ಕರ್ನಾಟಕ ರಾಜ್ಯದಲ್ಲಿಯೇ ಒಂದು ಹಳೆಯದಾದ ಆಸ್ಪತ್ರೆ ಎಂದರೆ ವಿಕ್ಟೋರಿಯಾ ಆಸ್ಪತ್ರೆ. ಈ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆಯುತ್ತಿದೆ ಎಂದು ಅನೇಕ ಸಲ ಈ ಸದನದಲ್ಲಿ ಚರ್ಚೆಯಾಗಿದೆ. ಅಲ್ಲಿಗೆ ಸರ್ಕಾರದಿಂದ ಹೋಗತಕ್ಕಂಥ ಹಣ, ಹಾಗೂ ಅಲ್ಲಿ ಆಸ್ಪತ್ರೆಗೆ ಬೇಕಾಗಿರತಕ್ಕಂಥ ಸಲಕರಣೆಗಳನ್ನು ಅಂದರೆ ಔಷಧಿಗಳು ಹಾಗೂ ರಾಸಾಯನಿಕ ವಸ್ತುಗಳನ್ನು ಖರೀದಿ ಮಾಡುವುದರಲ್ಲಿ ಭಾರಿ ಅವ್ಯವಹಾರ ನಡೆದಿದೆ. ಅಲ್ಲಿರತಕ್ಕಂಥ ಒಬ್ಬ ಚೀಫ್ ಫಾರ್ಮಾಸಿಸ್ಟ್ ಸುಮಾರು 6